371

1365

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ಯ 1904--1905ನೆ ಇಸವಿ ಅರ್ಜೀ ನಂಬರ್ 65.

ಮೃತಪಟ್ಟ ರಾಮುಸ್ವಾಮೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರು ಕಿಲ್ಲೆ ಮೊಹಲ್ಲಾ ದೇವೀರಾಂಬಾ ಅಗ್ರಹಾರದಲ್ಲಿರುವ ಲಕ್ಷ್ಮಿದೇವಮ್ಮ, ಮೃತಪಟ್ಟ ಸದರೀ ರಾಮು ಸ್ವಾಮೈಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ನೋಲೆ ಬೆಟ್ಟದಪುರದ ವಾಸಸ್ಥರಾಗಿ ಮೃತಪಟ್ಟ ರಾಮುಸ್ವಾಮೈಯ್ಯ ನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ಯ 1901ನೆ ಇಸವಿ 7ನೆ ರೆಗ್ಯುಲೇಶ್ಯ ಪ್ರಕಾರ ಸರಟಿಫಿಕೇಟ್ ಬ್ಯೂ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ಯ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮುಸ್ವಾಮೈಯ್ಯ ನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1904ನೆ ಇಸವಿ ಆಗಸ್ಟು ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ವೊಹರಿನಿಂದ ನಮ್ಮ ದಸ್ತಖತ್ತೂಡನೆ ಕೊಡೋಣಾಗಿದೆ.

ಟಿ. ಪರಮೇಶ್ವರ ಅಯ್ಯರ್,
ಸಬ್ ಜಡ್ಜ.

ಪ್ಲೇಗು ನೋಟಿಸು.

ತಾರೀಖು 10ನೆ ಆಗಸ್ಟು 1904.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಹಾಸನ ತಾಲ್ಲೂಕು ಗೊರೂರು ಇನ್‌ಸ್ಪೆಕ್ಷನ್ ಲಾಡ್ಜ್ ಪ್ಲೇಗು ರೋಗದಿಂದ ಇನ್‌ಫೆಕ್ಟೆಡ್ ಆಗಿಯು ಮತ್ತು ದುಸರಾ ನೋಟೀಸು ಕೊಡುವ ವರಿಗೂ ಇಳಿದುಕೊಳ್ಳುವದಕ್ಕೆ ಅರ್ಹವಾದ್ದಲ್ಲವಾಗಿಯು ಇದೆ.

ಸಿ. ಎ. ಮಹದೇವ ಶಾಸ್ತ್ರಿ,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಬೆಂಗಳೂರ್ ಗೌರ್ನಮೆಂಟ್ ಸೆಕ್ರಟ್‌ರಿಲ್ ಬುಕ್ ಡಿಪೋ.

ನೋಟಿಸ್.

ಬ ತಾರೀಖು 1ನೆ ಆಗಸ್ಟು 1904.

1905ನೆ ಸಾಲಿನ ಲೋವರ್ ಸೆಕಂಡರೀ ಟೆಕ್ಸ್‌ಟ್ ಗದ್ಯಭಾಗವು ಈಗ ಮೂರಾಟಕ್ಕೆ ಸಿದ್ಧವಾಗಿರುತ್ತೆಂಬದಾಗಿ ಇದರಿಂದ ತಿಳಿಸಲ್ಪಟ್ಟಿದೆ. ಖರೀದಿ ಪ್ರತಿ ಬಂದಕ್ಕೆ ಅಣೆ 2½ (ಎರಡುವರಾಣೆಗಳು.)

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ನೋಟಿಸ್.

ತಾರೀಖು 27ನೆ ಆಗಸ್ಟು 1904.

ಚಿಕ್ಕ ಮಂಡ್ಯದ ಚೆನ್ನನ ಮಗ ಬೋರನ ಹೆಸರಿಗೆ ಮಂಡ್ಯದ ಸ್ಟ್ಯಾಂಪುವೆಂಡರು ಸಂಜೀವಯ್ಯನವರ ಬಳಿ ಬಿಕರಿ ಬಿದ್ದಿದ್ದ ನಾಲ್ಕಾಣೆ ಛಾಪಾಕಾಗದ (ಬಂದು) ಬರಿಯದೆ ಇದ್ದದ್ದು ನಂಬಿಗೆ ಮೇಲೆ ನನ್ನಲ್ಲಿ ಸುಮಾರು ಇಪ್ಪತ್ತು ವರುಷದಿಂದ ಬಿದ್ದಿತ್ತು. ಅದನ್ನು ಈಗ್ಯೆ 4 ವರುಷದ ಕೆಳಗೆ ಸಾತನೂರು ಪಟೇಲ ಕಾಳೇಗೌಡನ ಮಗ ಪುಟ್ಟೇಗೌಡ ತೆಕ್ಕೊಂಡುಹೋಗಿ ಅನೇಕಾವರ್ತಿ ರೂ ಬರೂದಲ್ಲಿಯೂ ಮತ್ತು 15—8—04ನೆ ಮಾರ್ಚಿಂ 14ನೆ ನಂಬರು ರಿಜಿಸ್ಟರ್ ನೋಟೀಸು ಮೂಲಕವೂ ಸಹ ತಗಾದೆ ಮಾಡಿದರೂ ಕೊಡದೆ ದಬಾಯಿಸುತ್ತಾನೆ. ಸದರೀ ಕಾಗದದಲ್ಲಿ ಏನಾದರೂ ದಸ್ತೈವಜು ಬರದು ದಾಖಲೆಗೆ ಬಂದರೆ ಸರ್ಕಾರದಲ್ಲಾಗಲಿ ಪ್ರೈವೆಟಿನಲ್ಲಾಗಲಿ ಮಂಜೂರ್ಮಾಡಕೂಡದು.

✓ ಮಂಡ್ಯದ ತಾಲ್ಲೂಕು ಕೋಡ್ಲಹಳ್ಳಿ ಜೊಗ್ಗಿಡನ ಗುರ್ತಿನ ರುಜು.